**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ</u>**
**<u>ಜೇವರ್ಗಿ</u>**

**<u>ಸಿಸಿ ನಂ.523/2016</u>**

**<u>ಚಾಸಾ-7/ಪಿಡಬ್ಲೂ-4</u>**

| | |
|---|---|
| **ಹೆಸರು** | ಸಿದ್ದಮ್ಮ |
| **ತಂದೆ ಹೆಸರು** | ಈರಪ್ಪ |
| **ವಯಸ್ಸು** | 60-ವರ್ಷಗಳು |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಕಾಚಾಪೂರ |

**<u>ದಿನಾಂಕ 08.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.</u>**

ಚಾಸಾ-1 ನನ್ನ ತಂಗಿ. ಚಾಸಾ-8, 9 ಮತ್ತು 11 ರವರ ನನಗೆ ಪರಿಚಯ ಇರುತ್ತದೆ. ಚಾಸಾ-11 ನನ್ನ ಮಗ. ಆರೋಪಿಯು ನನಗೆ ಗೊತ್ತು. ಮೃತ ತಾಯಮ್ಮ ನನ್ನ ನೇಗೆಣಿ, ದೊಡ್ಡಮ್ಮ ನನ್ನ ನೇಗೆಣಿಯ ಮಗಳು.

ಈಗ ಸುಮಾರು 8 ವರ್ಷಗಳ ಹಿಂದೆ ನಾನು ಮೃತ ತಾಯಮ್ಮ ಮತ್ತು ದೊಡ್ಡಮ್ಮ. ಚಾಸಾ-1, ಚಾಸಾ-8 ರಿಂದ 11ರವರು ಕೂಡಿಕೊಂಡು ಆರೋಪಿತನು ನಡೆಸುತ್ತಿದ್ದ ಟಂ ಟಂನಲ್ಲಿ ಹಂಗರಗಾ ಬಿ ಗ್ರಾಮಕ್ಕೆ ಹೋಗಿರುತ್ತೇವೆ. ನಂತರ ನಾವು ಕಾರ್ಯಕ್ರಮವನ್ನು ಮುಗಿಸಿಕೊಂಡು ಕಾಚಾಪೂರಕ್ಕೆ ರಾತ್ರಿ 08.40 ಗಂಟೆ ಸುಮಾರಿಗೆ ಆರೋಪಿತನು ನಡೆಸುತ್ತಿರುವ ಟಂಟಂನಲ್ಲಿ ಕುಳಿತುಕೊಂಡು ಬರುತ್ತಿದ್ದಾಗ ಆರೋಪಿತನು ಟಂಟಂನ್ನು ಅತಿ ವೇಗವಾಗಿ ನಡೆಸಿಕೊಂಡು ಬಂದು ಸೈದಾಪೂರ ಕ್ರಾಸ ಹತ್ತಿರ ಎದುರಿಗೆ ಬಂದ ಟ್ರಾಕ್ಟರಿನ ಟ್ರೇಲರ ಟಂಟಂಗೆ ಬಡಿದು ದೊಡ್ಡಮ್ಮಗೆ ತಲೆಯ ಭಾಗಕ್ಕೆ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ.

ನಂತರ ತಾಯಮ್ಮಳಿಗೆ ಎಡಗಾಲಿಗೆ ಮತ್ತು ಎಡಗೈಗೆ ಭಾರಿ ರಕ್ತಗಾಯವಾಗಿ ನಂತರ ಚಿಕಿತ್ಸೆಗಾಗಿ ಯಡ್ರಾಮಿಯ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಯ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿದಾಗ ಮೃತಪಟ್ಟಿರುತ್ತಾರೆ. ಅಪಘಾತ ಪಡಿಸಿದ ಟ್ರಾಕ್ಟರ ಮತ್ತು ಟಂಟಂ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ರಿಂದ 9 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಮಾನ್ಯ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿದ್ದು. ಆರೋಪಿಯ ಹೆಸರು ಮಲ್ಕಪ್ಪ ಎಂದು ಹೇಳಿರುತ್ತಾರೆ. ಸದರಿ ಅಪಘಾತವು ಆರೋಪಿ ಮಲ್ಕಪ್ಪ ತಪ್ಪಿನಿಂದ ಆಗಿರುತ್ತದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಸ.ಸ.ಅರವರು ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು: ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

**<u>ಮಾನ್ಯ ಸ.ಸ.ಅ. ರವರು ಉತ್ತರ ಸೂಚಕ ಪ್ರಶ್ನೆಗಳನ್ನು ಕೇಳಲಾಗಿ ಅದಕ್ಕೆ ಆರೋಪಿತರ ಪರ ವಕೀಲರು ತಕರಾರು ಸೂಚಿಸಿರುತ್ತಾರೆ. ಆದ್ದರಿಂದ ಸದರಿ ಪಾಟಿ ಸವಾಲನ್ನು ತಕರಾರನ್ನು ತಳ್ಳಿ ಹಾಕಿ ಪಾಟಿ ಸವಾಲು ತೆಗೆದುಕೊಳ್ಳಲಾಯಿತು.</u>**

ದಿನಾಂಕ 16-07-2016ರಂದು ಟ್ರಾಕ್ಟರ ಚಾಲಕ ಮಾದೇಗೌಡ ಎಂದು ಜೇವರ್ಗಿಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಅಪಘಾತವು ದಿನಾಂಕ 23-06-2016ರಂದು ನಡೆದಿರುತ್ತದೆ ಎಂದರೆ ಸರಿ. ಅಪಘಾತ ಪಡಿಸಿರುವ ಟಂಟಂ ನಂಬರ KA-32-C-3654 ಎಂದರೆ ಸರಿ. ಅಪಘಾತ ಪಡಿಸಿದ ಟ್ರಾಕ್ಟರ ಇಂಜನದ ಡಬ್ಲೂ ಎಕ್ಸ ಸಿಎಫ್ 40606099778, ಇಂಜನ ನಂಬರ 431024 ಎಸ್ ಟಿ ಎಫ್ 11259 ಮತ್ತು ಟ್ರಾಲಿಯ ಚಸ್ಸಿ ನಂಬರ ಎಸ್ ವಿ ಜೆ ಎ 11006 ಎಂದರೆ ಸರಿ. ಮೃತ ತಾಯಮ್ಮಗೆ ಬಲಗಡೆ ರಟ್ಟೆಗೆ ಭಾರಿ ರಕ್ತ ಗಾಯ ಮತ್ತು ಬಲಗಾಲ ಚಪ್ಪಗೆ ಭಾರಿ ರಕ್ತಗಾಯ ವಾಗಿರುತ್ತದೆ ಎಂದರೆ ಸರಿ. ಅಪಘಾತವಾದ ನಂತರ ನಮ್ಮ ಜೊತೆ ಟಂಟಂ ಚಾಲಕ ಆರೋಪಿತನು ಸಹ ನಮೊಂದಿಗೆ ಇದ್ದನು ಎಂದರೆ ಸರಿ. ನಾನು ಪೊಲೀಸರ ಮುಂದೆ ದಿನಾಂಕ 24-06-2016 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:</u>**

ನಾನು ಟಂಟಂನ ಬಲಗಡೆ ಭಾಗದಲ್ಲಿ ಕುಳಿತಿರುತ್ತೇನೆ. ನನಗೆ ಅಪಘಾತದಲ್ಲಿ ಯಾವುದೇ ಗಾಯಗಳು ಆಗಿರುವುದಿಲ್ಲ. ಸೈದಾಪೂರ ಕ್ರಾಸಬಳಿ ಬಹಳಷ್ಟು ಜನ ಸಂಚಾರ ಮತ್ತು ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಟಂಟಂ ವಾಹನವು ಸಾಮಾನ್ಯವಾಗಿ ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಟ್ರಾಕ್ಟರ ಟ್ರೈಲರ್ ಟಂಟಂ ವಾಹನಕ್ಕೆ ಬಂದು ಹೊಡೆದಿದ್ದರಿಂದ ಅಪಘಾತ ವಾಗಿದೆ ಎಂದರೆ ಸರಿ. ಸದರಿ ಅಪಘಾತವು ಟ್ರಾಕ್ಟರ ಡ್ರೈವರ ತಪ್ಪಿ ನಿಂದ ಆಗಿರುತ್ತದೆ ಎಂದರೆ ಸಾಕ್ಷಿಯು ಟಂಟಂ ಮತ್ತು ಟ್ರಾಕ್ಟರನ ಚಾಲಕ ಇಬ್ಬರ ತಪ್ಪಿ ನಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಟಂಟಂನ ಮಧ್ಯ ಭಾಗದ ಬಲಗಡೆ ಸಿಟ್ ನಲ್ಲಿ ಕುಳಿತಿರುತ್ತೇನೆ. ಟಂಟಂನ್ನು ಆರೋಪಿತನು ಚಾಲಾಯಿಸುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ದೊಡ್ಡಮ್ಮ ಮತ್ತು ತಾಯಮ್ಮಳಿಗೆ ಅಪಘಾತದ ಪರಿಹಾರ ಸಿಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೃತ ದೊಡ್ಡಮ್ಮ ಮತ್ತು ತಾಯಮ್ಮ ಇಬ್ಬರು ಟಂಟಂನ ಮಧ್ಯದ ಸಿಟ್‌ನ ಎಡಬದಿಗೆ ಕುಳಿತಿರುತ್ತಾರೆ. ಆರೋಪಿತನ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇರುವುದಿಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ

**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ**
**ಜೇವರ್ಗಿ**

**ಸಿಸಿ ನಂ.523/2016**

**ಚಾಸಾ-5/ಪಿಡಬ್ಲೂ-5**

| | |
|---|---|
| **ಹೆಸರು** | ತಯಬ ಅಲಿ |
| **ತಂದೆ ಹೆಸರು** | ಗುಲಾಬಸಾಬ |
| **ವಯಸ್ಸು** | 38 ವರ್ಷಗಳು |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಆಲೂರ |

**ದಿನಾಂಕ 08.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-6 ನನಗೆ ಗೊತ್ತು. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಜಪ್ತಿ ಹಾಗೂ ಗುನ್ನೆ ಜಾಗೆಯ ಪಂಚನಾಮೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಜಪ್ತಿ ಪಂಚನಾಮೆಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುನ್ನೆ ಸ್ಥಳದ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಗುನ್ನೆ ಸ್ಥಳದ ಪಂಚನಾಮೆಯನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 8-ವರ್ಷಗಳ ಹಿಂದೆ ಆಲೂರದಲ್ಲಿ ಮಾಡಿರುತ್ತೇನೆ. ಪೊಲೀಸರು ಯಾವ ವಿಚಾರಕ್ಕೆ ಸದರಿ ಸಹಿ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಸ.ಸ.ಅರವರು ಅನುಮತಿಯುನ್ನ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 24.06.2016 ರಂದು ಮುಂಜಾನೆ 12.30 ರಿಂದ 1.00 ಗಂಟೆಯವರೆಗೆ ನನ್ನ ಹಾಗೂ ಚಾಸಾ-6 ರವರ ಸಮಕ್ಷಮ ಪೋಲಿಸರು ಯಡ್ರಾಮಿ ಪೋಲಿಸ್ ಠಾಣೆಯಲ್ಲಿ ಒಂದು ಟ್ರಾಕ್ಟರ ಇಂಜನದ ಡಬ್ಲೂ ಎಕ್ಸ ಸಿಎಫ್ 40606099778, ಇಂಜನ ನಂಬರ 431024 ಎಸ್ ಟಿ ಎಫ್ 11259 ಮತ್ತು ಟ್ರಾಲಿಯ ಚಸ್ಸಿ ನಂಬರ ಎಸ್ ವಿ ಜೆ ಎ 11006 ನ್ನು ಪಂಚನಾಮೆ ಮೂಲಕ ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

ದಿನಾಂಕ 24.06.2016 ರಂದು ಮುಂಜಾನೆ 1.15 ರಿಂದ 1.45 ಗಂಟೆಯವರೆಗೆ ನನ್ನ ಹಾಗೂ ಚಾಸಾ-6 ರವರ ಸಮಕ್ಷಮ ಪೋಲಿಸರು ಯಡ್ರಾಮಿ ಪೋಲಿಸ್ ಠಾಣೆಯಲ್ಲಿ ಒಂದು ಟಂಟಂ ನಂಬರ KA-32-C-3654 ನ್ನು ಪಂಚನಾಮೆ ಮೂಲಕ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ

**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ</u>**
**<u>ಜೇವರ್ಗಿ</u>**

**<u>ಸಿಸಿ ನಂ.523/2016</u>**

**<u>ಚಾಸಾ-9/ಪಿಡಬ್ಲೂ-5</u>**

| | |
|---|---|
| **ಹೆಸರು** | ನಾನು |
| **ತಂದೆ ಹೆಸರು** | ಗಂಗು ರಾಠೋಡ |
| **ವಯಸ್ಸು** | 48-ವರ್ಷಗಳು |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಆಲೂರ |

**<u>ದಿನಾಂಕ 08.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.</u>**

ಚಾಸಾ-1, 7 ರಿಂದ 12 ರವರು ನನಗೆ ಪರಿಚಯವಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಅಪಘಾತ ಹೇಗಾಯಿತು ಯಾರ ತಪ್ಪಿನಿಂದಾಯಿತು ಎಂದಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಸ.ಸ.ಅರವರು ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 23.06.2016 ರಂದು ರಾತ್ರಿ 8.45 ಗಂಟೆಗೆ ನಾನು ಮತ್ತು ಚಾಸಾ-8 ರವರು ಮೋಟರ ಸೈಕಲ್ ಮೇಲೆ ಹೊರಟಿದ್ದಾಗ ಸೈದಾಪೂರ ಕ್ರಾಸ್ ಹತ್ತಿರ ನಮ್ಮ ಮುಂದೆ ಒಂದು ಟ್ರ್ಯಾಕ್ಟರ ಅತಿ ವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ಎದುರಿನಿಂದ ಒಂದು ಟಂಟಂ ಅತಿ ವೇಗ ಮತ್ತು ನಿರ್ಲಕ್ಷತನದಿಂದ ಬಂದು ತಮ್ಮ ತಮ್ಮಲ್ಲೆ ಸೈಡ ಕೊಡದೆ ಒಮ್ಮೆಲೆ ಕಟ್ ಹೊಡೆದಿದ್ದರಿಂದ ಟ್ರ್ಯಾಕ್ಟರ ಟ್ರಾಲಿ ಟಂಟಂನ ಬಲಗಡೆ ಕುಳಿತವರಿಗೆ ಬಡೆದ್ದರಿಂದ ಒಬ್ಬ ಹುಡುಗಿಯ ತಲೆ ಮೇಲ್ಭಾಗಕ್ಕೆ, ಹೊಟ್ಟೆಯ ಮೇಲೆ, ಬಲಗಾಲ ತೊಡೆಗೆ, ಮೊಳಕಾಲ ಕೆಳಗೆ ಭಾರಿ ರಕ್ತಗಾಯಗಳಾಗಿ ಸ್ಥಳದಲ್ಲೆ ಮೃತಪಟ್ಟಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಮತ್ತೊಬ್ಬ ಹೆಣ್ಣುಮಗಳಿಗೆ ಭಾರಿ ರಕ್ತಗಾಯಗಳಾಗಿ ಎಲುಬು ಮರಿದು ಮಾಂಸ ಹೊರಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ಮೃತಪಟ್ಟವಳು ದೊಡ್ಡಮ್ಮ ಹಾಗೂ ಗಾಯಾಳುವಿನ ಹೆಸರು ತಾಯಮ್ಮ ಎಂದರೆ ನನಗೆ ಗೊತ್ತಿಲ್ಲ. ಟಂಟಂ ಚಾಲಕನ ಹೆಸರು ಮಕಪ್ಪ ತಳವಾರ ಎಂದರೆ ನನಗೆ ಗೊತ್ತಿಲ್ಲ. ಟಂಟಂ ನಂ.ಕೆಎ-32/ಸಿ-3654 ಎಂದರೆ ನನಗೆ ಗೊತ್ತಿಲ್ಲ. ಟ್ರಾಕ್ಟರ ಇಂಜನದ ಡಬ್ಲೂ ಎಕ್ಸ ಸಿಎಫ್ 40606099778, ಇಂಜನ ನಂಬರ 431024 ಎಸ್ ಟಿ ಎಫ್ 11259 ಮತ್ತು ಟ್ರಾಲಿಯ ಚಸ್ಸಿ ನಂಬರ ಎಸ್ ವಿ ಜೆ ಎ 11006 ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ಟ್ರ್ಯಾಕ್ಟರ ಹಾಗೂ ಟಂಟಂ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ

ವಿಚಾರವಾಗಿ ದಿನಾಂಕ 24.06.2016 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-14 ಎಂದು ಗುರುತಿಸಲಾಯಿತು. ದಿನಾಂಕ 16.07.2016 ರಂದು ಆರೋಪಿಯ ಗುರುತಿಸುವಿಕೆ ಪೋಲಿಸರಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ನಿಪಿ-14 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:** ಇರುವುದಿಲ್ಲ
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ